## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## SC.93/2021

**P.W.-01**
**C.W.-01**

| | | |
|---|---|---|
| ಹೆಸರು | : | G.Pushparaj |
| ತಂದೆಯ ಹೆಸರು | : | Late.V.B.Jeorge |
| ವಯಸ್ಸು | : | 45 ವರ್ಷ |
| ಉದ್ಯೋಗ | : | Sub-Contractor |
| ವಾಸಸ್ಥಳ | : | Kesare, Kurimandi, Mysuru |

**ದಿನಾಂಕಃ 18.08.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ–**

ನಾನು ರಸ್ತೆಗೆ ಟಾರು ಹಾಕುವ ಸಬ್–ಕಾಂಟ್ರಾಕ್ಟರ್ ಆಗಿ ಕಳೆದ 20 ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿರುತ್ತೇನೆ. ನಾನು ಕುರಿಮಂಡಿ, 5 ನೇ ಕ್ರಾಸಿನಲ್ಲಿ ವಾಸ ಮಾಡುತ್ತೇನೆ. ನ್ಯಾಯಾಲಯದ ಮುಂದಿರುವ ಮೂವರು ಆರೋಪಿತರು ನನಗೆ ಗೊತ್ತು. ಆ ಆರೋಪಿತರು ಸಹ ನಮ್ಮ ಏರಿಯಾದಲ್ಲೇ ವಾಸ ಮಾಡುತ್ತಾರೆ. ಈ ಘಟನೆ ನಡೆಯುವ ಮೊದಲು 1 ನೇ ಆರೋಪಿ ವಿನಯ್ ಆತನ ತಂದೆಯ ಜೊತೆಯಲ್ಲಿ ಹೋಟೆಲನ್ನು ನಡೆಸುತ್ತಿದ್ದ. ನಂತರ ಆ್ಯಂಬುಲೆನ್ಸ್ ಓಡಿಸಲು ಪ್ರಾರಂಭಿಸಿದ್ದ. 3 ನೇ ಆರೋಪಿ ಅಪ್ಪು ಯಾವುದೇ ಕೆಲಸ ಮಾಡುತ್ತಿರಲಿಲ್ಲ. ಮನೆಯಲ್ಲೇ ಇರುತ್ತಿದ್ದ. 2 ನೇ ಆರೋಪಿ ನಿಖಿಲ್ ಬೆಳಗಿನ ಸಮಯದಲ್ಲಿ ಎಪಿಎಂಸಿಯಲ್ಲಿ ಕೆಲಸ ಮಾಡಲು ಹೋಗುತ್ತಿದ್ದ.

2. ನನ್ನ ಜೊತೆ ಯಾವಾಗಲೂ 15 ಜನ ದಿನಗೂಲಿಗಳಾಗಿ ಕೆಲಸ ಮಾಡುತ್ತಾರೆ. ಮೃತ ರವಿ ನನಗೆ ಗೊತ್ತು. ಆತ ದಿನಗೂಲಿ ಕೆಲಸಕ್ಕೆ ಬರುವಾಗ ಪರಿಚಯವಾಗಿ ನಂತರ ನನ್ನ ಬಳಿಯಲ್ಲಿ ರೋಡ್ ರೋಲರನ್ನು ಡ್ರೈವ್ ಮಾಡಲು ಬರುತ್ತಿದ್ದ. ಆತ ಮೃತ ಪಡುವ 8 ತಿಂಗಳ ಹಿಂದಿನಿಂದ, ನನ್ನ ಬಳಿಯಲ್ಲಿ ಕೆಲಸಕ್ಕೆ ಬರುತ್ತಿದ್ದ. ಆತ ಮೂಲತಃ ಚಾಮರಾಜನಗರ ಜಿಲ್ಲೆಯ ಗಾಣಗನೂರು ಪುರ ಗ್ರಾಮದವನು. ಆತ ಅಲ್ಲಿಂದ ಕೂಲಿ ಕೆಲಸಕ್ಕಾಗಿ ಬಂದಿದ್ದ. ಆತ ಸೂರ್ಯಕುಮಾರ್ ರವರ ಮನೆಯಲ್ಲಿ ಊಟ ಮಾಡಿಕೊಂಡು, ತಾನು ಬಾಡಿಗೆಗೆ ಪಡೆದಿದ್ದ ಕೆಸರೇ ಕುರಿಮಂಡಿಯ ಎ–ಬ್ಲಾಕಿನ ಮೊದಲನೆ ಮಹಡಿಯಲ್ಲಿ ಮಲಗುತ್ತಿದ್ದ. ಮೃತ ರವಿಗೆ ಆರೋಪಿತರು ಮತ್ತು ಆ ಏರಿಯಾದಲ್ಲಿದ್ದ ಹುಡುಗರೆಲ್ಲರೂ, ಸ್ನೇಹಿತರಾಗಿದ್ದರು. ಎಲ್ಲರೊಂದಿಗೂ ಆತ ಚೆನ್ನಾಗಿರುತ್ತಿದ್ದ.

3. ದಿಃ15.12.2020 ರಂದು ನನ್ನ ಸ್ನೇಹಿತ ದಾಸ್ ಎನ್ನುವವರು ಬೆಳಿಗ್ಗೆ 10.16 ರ ಸಮಯಕ್ಕೆ ಫೋನ್ ಮಾಡಿದರು. ಆತನ ಫೋನ್ ನಂಬರ್ 9845178044. ನನ್ನ ಫೋನ್ ನಂ.9448049145. ಫೋನಿನಲ್ಲಿ ಆತ, ರವಿಯ ಮರ್ಡರ್ ಆಗಿದೆ ಬಾ ಎಂದರು. ತಕ್ಷಣವೇ ನಾನು ರವಿ ಬಾಡಿಗೆಗೆ ಪಡೆದಿದ್ದ ಮನೆಯ ಹತ್ತಿರಕ್ಕೆ ಹೋದೆ. ನೋಡಿದಾಗ ಆತನ ಮನೆಯ ಹಾಲಿನಲ್ಲಿ ರವಿ ಅಂಗಾತವಾಗಿ ಬಿದಿದ್ದ. ನೋಡಿದಾಗ ಆತನ ಎಡಗಾಲಿನ ತೊಡೆಯ ಮೇಲೆ ಬ್ಲೇಡಿನಿಂದ ಹೊಡೆದ ರೀತಿಯ ಗಾಯವಿತ್ತು. ಕತ್ತಿನಲ್ಲಿ ಹಗ್ಗ ಬಿಗಿದರೆ ಬರುವಂತಹ ಕಪ್ಪು ಮಾರ್ಕ್ ಇತ್ತು. ಏರಿಯಾದ ಎಲ್ಲಾ ಜನರು ಅಲ್ಲಿ ಸೇರಿದ್ದರು. ನನಗೆ ಫೋನ್ ಮಾಡಿದ್ದ ದಾಸ್, ದಿಃ14.12.2020 ರ ರಾತ್ರಿ 10.00 ರಿಂದ 10.30 ರ ಒಳಗೆ 1 ಮತ್ತು 2 ನೇ ಆರೋಪಿ ಹಾಗೂ ರವಿಯ ನಡುವೆ ಕುರಿ ಮಂಡಿಯ ಮೈನ್ ಗೇಟ್ ಬಳಿಯಲ್ಲಿ ಗಲಾಟೆಯಾಗುತ್ತಿತ್ತು ಎಂದು ತಿಳಿಸಿದರು. ಈ ವಿಷಯವನ್ನು ಅಲ್ಲಿ ಸೇರಿದ್ದ ಜನರು ನನ್ನ ಸ್ನೇಹಿತ ದಾಸ್ ರಿಗೆ ಹೇಳಿದ್ದರಂತೆ.

4. ಸುಮಾರು ಅರ್ಧ ಗಂಟೆಗಳ ಕಾಲ ಮೃತ ರವಿಯ ಮನೆಯವರಿಗೆ ಫೋನ್ ಮಾಡಲು ಪ್ರಯತ್ನಿಸಿದೆ. ಆದರೆ ಕನೆಕ್ಟ್ ಆಗಲಿಲ್ಲ. ನಂತರ ಪೊಲೀಸರಿಗೆ ಫೋನ್ ಮಾಡಿದೆ. ಅವರು ಸ್ಥಳಕ್ಕೆ ಬಂದರು. ದೂರನ್ನು ನೀಡಲು ಹೇಳಿದರು. ದೂರು ನೀಡಲು ಯಾರು ಮುಂದೆ ಬರಲಿಲ್ಲ. ಹೀಗಾಗಿ, ಆತ ನನ್ನ ಬಳಿಯಲ್ಲಿ ಸ್ವಲ್ಪ ದಿನಗಳ ಕಾಲ ಕೆಲಸ ಮಾಡಿದ್ದರಿಂದ ನಾನೇ ಎನ್.ಆರ್.ಪು.ಠಾಣೆಗೆ ಹೋಗಿ ದೂರನ್ನು ನೀಡಿದೆ. ಆ ದೂರನ್ನು ನಾನೀಗ ನೋಡುತ್ತಿದ್ದೇನೆ. ಅದರ ಮೇಲಿರುವ ನನ್ನ ಸಹಿಯನ್ನು ಗುರುತಿಸುತ್ತೇನೆ. ದೂರನ್ನು ನಿಪಿ-1 ಎಂತಲೂ, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ-1(ಎ) ಎಂತಲೂ ಗುರುತು ಪಡಿಸಿಕೊಳ್ಳಲಾಯಿತು. ಆ ದೂರನ್ನು ಖುದ್ದು ನಾನೇ ಬರೆದು ಕೊಟ್ಟಿರುತ್ತೇನೆ.

5. ನಾನು ದೂರು ಕೊಟ್ಟಾಗ ಬೆಳಿಗ್ಗೆ 11.30 ಆಗಿತ್ತು ಪೊಲೀಸರು ಸ್ಥಳಕ್ಕೆ ಬಂದಾಗ 1.30 ಆಗಿತ್ತು. ಬಂದು ಮೃತ ದೇಹವನ್ನು ಪರಿಶೀಲಿಸಿದರು. ಬೆರಳಚ್ಚು ತಜ್ಞರನ್ನು ಕರೆಯಿಸಿದ್ದರು. ಮೃತ ರವಿಯ ತಲೆಯ ಭಾಗದಲ್ಲಿ ಇದ್ದಂತಹ ಬಿಯರ್ ಬಾಟಲು, 90 ಎಂ.ಎಲ್.ನ ಟೆಟ್ರಾ ಪ್ಯಾಕೆಟುಗಳು, ಒಂದು ಕೋಕ ಕೋಲಾ ಬಾಟಲು, ನೀರು ಕುಡಿಯುವ ಒಂದು ಸ್ಟೀಲ್ ಲೋಟ, 2 ಪ್ಲಾಸ್ಟಿಕ್ ಲೋಟಗಳು, ಒಂದು ಲೋಟದಲ್ಲಿ ಕುಡಿದು ಉಳಿದ ಮದ್ಯ ಇತ್ತು ಮತ್ತು ಬೀಡಿ-ಸಿಗರೇಟ್ ತುಂಡುಗಳು ಇದ್ದವು. ಲೋಟದಲ್ಲಿ ಕುಡಿದು ಉಳಿದಿದ್ದ ಮದ್ಯವನ್ನು ಪೊಲೀಸರು ಇನ್ನೊಂದು ಬಾಟಲಿಗೆ ಹಾಕಿ ತೆಗೆದುಕೊಂಡರು. ಅವುಗಳ ಮೇಲೆ ಬೆರಳಚ್ಚು ಇದೆಯೇ ಎಂದು ಪರಿಶೀಲಿಸಿದರು. ಇವುಗಳನ್ನೆಲ್ಲಾ

ಒಂದು ಬಿಳಿ ಬ್ಯಾಗಿಗೆ ಹಾಕಿ ಸೀಲು ಮಾಡಿ ಅಮಾನತು ಪಡಿಸಿಕೊಂಡರು. ರವಿಯ ಅರ್ಧ ದೇಹ ಚಾಪೆಯ ಮೇಲೆ, ಇನ್ನರ್ಧ ದೇಹ ನೆಲದ ಮೇಲೂ ಇತ್ತು. ಚಾಪೆಯ ರಕ್ತದ ಕಲೆ ಇತ್ತು. ಆ ಚಾಪೆಯನ್ನು ಸಹ ಪೊಲೀಸರು ಅಮಾನತು ಪಡಿಸಿಕೊಂಡರು. ಮೃತ ರವಿಯ ದೇಹದ ಮೇಲೆ ಇದ್ದಂತಹ ಹಾಫ್ ನಿಕ್ಕರ್ ಇತ್ತು. ಆತನ ಟಿ–ಶರ್ಟ್ ಅಲ್ಲಿ ಬಿದ್ದಿತ್ತು. ಇವುಗಳನ್ನೆಲ್ಲಾ ಮಹಜರ್ ಮೂಲಕ ಅಮಾನತು ಪಡಿಸಿಕೊಂಡರು. ಆ ಪ್ರಕ್ರಿಯೆಯ ಬಾಬ್ತು ಫೋಟೋಗಳನ್ನು ತೆಗೆದುಕೊಂಡರು. ಆ ಫೋಟೋದಲ್ಲಿ ನಾನು ಇದ್ದೇನೆ. ಈಗ ನೋಡುತ್ತಿರುವ 2 ಫೋಟೋಗಳಲ್ಲಿ ನಾನು ಇದ್ದೇನೆ. ಉಳಿದ ಫೋಟೋಗಳಲ್ಲಿ ಪೊಲೀಸರು ಮತ್ತು ಬೆರಳಚ್ಚು ತಜ್ಞರು ಇದ್ದಾರೆ. ಉಳಿದ ಫೋಟೋಗಳು ಮೃತ ರವಿಯ ಶವದ ಮತ್ತು ಅಲ್ಲಿದ ವಸ್ತುಗಳ ಫೋಟೋಗಳಾಗಿವೆ. ಒಟ್ಟು 12 ಫೋಟೋಗಳು ಇದ್ದು, ಅವುಗಳನ್ನು ನಿಪಿ–2 ರಿಂದ 13 ರವರೆಗೆ ಎಂದು ಗುರುತು ಪಡಿಸಿಕೊಳ್ಳಲಾಯಿತು.

6. ನಂತರ ಆ ಶವವನ್ನು ಜೆ.ಎಸ್.ಎಸ್.ಮೆಡಿಕಲ್ ಕಾಲೇಜಿಗೆ ಕಳುಹಿಸಿಕೊಟ್ಟರು. ಆ ದಿನ ರವಿಯ ತಂದೆ–ತಾಯಿ, ಸಂಬಂಧಿಕರು ಬಾರದೇ ಇದ್ದುದರಿಂದ, ಮರುದಿನ ಪೋಸ್ಟ್ ಮಾರ್ಟಮ್ ಮಾಡಲಾಯಿತು. ಆ ದಿನ ಆ ಸ್ಥಳದಲ್ಲಿ ಪೊಲೀಸರು ಅಮಾನತು ಪಡಿಸಿಕೊಂಡ ಸ್ವತ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸೀಲು ಮಾಡಿದ ಕಿಂಗ್‌ಫಿಶರ್ ಬಿಯರ್ ಬಾಟಲನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ಮು.ಮಾ.1 ಎಂದು ಗುರುತು ಪಡಿಸಿಕೊಳ್ಳಲಾಯಿತು. ಸೀಲು ಮಾಡಿದ 3 ಟೆಟ್ರಾ ಪ್ಯಾಕೆಟುಗಳಿರುವ ಬಿಳಿ ಬಟ್ಟೆಯ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 3 ಟೆಟ್ರಾ ಪ್ಯಾಕೆಟುಗಳು ಇರುವ ಬಿಳಿಯ ಬಟ್ಟೆಯ ಕವರನ್ನು ಮು.ಮಾ.2 ಎಂದು ಗುರುತು ಪಡಿಸಿಕೊಳ್ಳಲಾಯಿತು. ಸೀಲು ಮಾಡಿದ 180 ಎಂ.ಎಲ್. ಖಾಲಿ ಟೆಟ್ರಾ ಪ್ಯಾಕೆಟು ಇರುವ ಬಿಳಿ ಬಟ್ಟೆಯ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ಮು.ಮಾ.3 ಎಂದು ಗುರುತು ಪಡಿಸಿಕೊಳ್ಳಲಾಯಿತು. ಸೀಲು ಮಾಡಿದ ಖಾಲಿ ಕೋಕಕೋಲಾ ಪ್ಲಾಸ್ಟಿಕ್ ಬಾಟಲು ಇರುವ ಬಿಳಿ ಬಟ್ಟೆಯ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ಮು.ಮಾ.4 ಎಂದು ಗುರುತು ಪಡಿಸಿಕೊಳ್ಳಲಾಯಿತು. ಸೀಲು ಮಾಡಿದ 6 ಪ್ಲಾಸ್ಟಿಕ್ ಲೋಟಗಳು ಇರುವ ಬಿಳಿ ಬಟ್ಟೆಯ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಮು.ಮಾ.5 ಎಂದು ಗುರುತು ಪಡಿಸಿಕೊಳ್ಳಲಾಯಿತು. ಸೀಲು ಮಾಡಿದ ನೀಲಿ ಬಣ್ಣದ ಟಿ–ಶರ್ಟ್ ಇದ್ದ

ಬಿಳಿ ಬಟ್ಟೆಯ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ಮು.ಮಾ.6 ಎಂದು ಗುರುತು ಪಡಿಸಿಕೊಳ್ಳಲಾಯಿತು. ಸೀಲು ಮಾಡಿದ ಸ್ಟೀಲ್ ಲೋಟ ಮತ್ತು ಬೀಡಿ–ಸಿಗರೇಟ್ ತುಂಡುಗಳು ಇರುವ ಬಿಳಿ ಬಟ್ಟೆಯ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸ್ಟೀಲ್ ಲೋಟ ಮತ್ತು ಬೀಡಿ–ಸಿಗರೇಟ್ ತುಂಡುಗಳು ಇರುವ ಬಿಳಿಯ ಬಟ್ಟೆಯ ಕವರನ್ನು ಮು.ಮಾ.7 ಎಂದು ಗುರುತು ಪಡಿಸಿಕೊಳ್ಳಲಾಯಿತು. ಸೀಲು ಮಾಡಿದ ನೀರಿನ ಪ್ಲಾಸ್ಟಿಕ್ ಬಾಟಲು ಇದ್ದ ಬಿಳಿ ಬಟ್ಟೆಯ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ಮು.ಮಾ.8 ಎಂದು ಗುರುತು ಪಡಿಸಿಕೊಳ್ಳಲಾಯಿತು. ಸೀಲು ಮಾಡಿದ ಚಾಪೆ ಇರುವ ಬಿಳಿ ಬಟ್ಟೆಯ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ಮು.ಮಾ.9 ಎಂದು ಗುರುತು ಪಡಿಸಿಕೊಳ್ಳಲಾಯಿತು. ಸೀಲು ಮಾಡಿದ ಟೂಬರ್ಗ್ ಬಿಯರ್ ಇರುವ ಬಿಳಿ ಬಟ್ಟೆಯ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ಮು.ಮಾ.10 ಎಂದು ಗುರುತು ಪಡಿಸಿಕೊಳ್ಳಲಾಯಿತು.

7. ತಂದೆ–ತಾಯಿ ಬಂದು ಶವವನ್ನು ಶವಾಗಾರದಲ್ಲಿ ನೋಡಿ, ಶವವನ್ನು ತೆಗೆದುಕೊಂಡು ಹೋಗದೆ, ನೀವೇ ದಫನ್ ಮಾಡಿಕೊಳ್ಳಿ ಎಂದು ಹೋದರು. ನಂತರ ನಾವೇ ಅಂತಿಮ ಕ್ರಿಯೆಯನಲ್ಲು ನಡೆಸಿದೆವು.

8. 18 ನೇ ತಾರೀಖಿನಂದು ಎನ್.ಆರ್.ಠಾಣೆಗೆ ಹೋದೆ. 2 ಮತ್ತು 3 ನೇ ಆರೋಪಿತರು ಠಾಣೆಯಲ್ಲಿದ್ದರು. ನಾನು ಅವರನ್ನು ಏಕೆ ಹೀಗೆ ಮಾಡಿದಿರಿ ಮತ್ತು ಹೇಗೆ ಮಾಡಿದಿರಿ ಎಂದು ಕೇಳಿದಾಗ ನಿಖಿಲ್ ರವರು ಕಾಲು ಹಿಡಿದುಕೊಂಡರು, ಅಪ್ಪು ಮತ್ತು ವಿನಯ್ ರವರು ಟವೆಲನ್ನು ಕುತ್ತಿಗೆಗೆ ಹಾಕಿ ಎರಡು ಕಡೆಯಿಂದ ಎಳೆದೆವು ಎಂದು 2 ನೇ ಆರೋಪಿ ನಿಖಿಲ್ ಹೇಳಿದ.

9. ನಾನು ದೂರನ್ನು ನೀಡುವಾಗ ನನ್ನ ಸ್ನೇಹಿತ ದಾಸ್ ಮೊಬೈಲ್ ನಂಬರನ್ನು ತಪ್ಪಾಗಿ 9845078044 ಎಂದು ಬರೆದಿದ್ದೆ, ನಂತರ ಆತನ ಮೊಬೈಲ್ ನಂಬರು 9845178044 ಎಂದು ಪುನಃ ಮರು ಹೇಳಿಕೆಯಲ್ಲಿ ತಿಳಿಸಿರುತ್ತೇನೆ.

10. ಈಗ ತೋರಿಸಿದ ಫೋಟೋಗಳಲ್ಲಿ 1 ನೇ ಆರೋಪಿ ವಿನಯ್ ಹಾಗೂ ಮೃತ ರವಿ ಇದ್ದಾರೆ. ಆ ಫೋಟೋಗಳನ್ನು 4 ಇದ್ದು, ಅವುಗಳನ್ನು ನಿಪಿ-14 ರಿಂದ 17 ಎಂದು ಗುರುತು ಪಡಿಸಿಕೊಳ್ಳಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.